# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 379 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 11.12.2024 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ವಿವಿಧ ಹಂತದಲ್ಲಿ ನ್ಯಾಯಾಲಯಗಳ ಪ್ರಕರಣಗಳು ಸಹಿತ ಬಾಕಿಯಿರುವ ಒಟ್ಟು ಅರ್ಜಿಗಳ ವಿಲೇವಾರಿ ಮಾಡಲು ಸರಕಾರ ನಿಗಧಿಪಡಿಸಿದ್ದ ಕಾಲಮಿತಿ ಪಾಲಿಸಲು ಇಲಾಖೆಗೆ ಸಾಧ್ಯವಾಗಿದೆಯೇ; ಎಷ್ಟು ವಿಷಯಗಳ ಎಷ್ಟು ಪ್ರಕರಣಗಳನ್ನು ಬಗೆಹರಿಸಲಾಗಿದೆ; | ಕೆಲವು ಪ್ರಕರಣಗಳಲ್ಲಿ ವಾದಿ/ಪ್ರತಿವಾದಿಗಳು ವಿಚಾರಣೆಗೆ ಹೆಚ್ಚಿನ ಕಾಲಾವಕಾಶ ಕೋರಿರುವ ಕಾರಣ, ವಾದಿ/ಪ್ರತಿವಾದಿಗಳು ಮರಣ ಹೊಂದಿದಾಗ ಅವರ ವಾರಸುದಾರರನ್ನು ಪ್ರಕರಣಕ್ಕೆ ಸೇರ್ಪಡೆ ಮಾಡುವಲ್ಲಿ ವಿಳಂಬವಾಗುವ ಕಾರಣ ಹಾಗೂ ಸರ್ಕಾರದ ತುರ್ತು ಸಭೆಗಳು, ಕಾರ್ಯಕ್ರಮಗಳು ಮತ್ತು ಚುನಾವಣಾ ಕರ್ತವ್ಯ ನಿರ್ವಹಿಸಬೇಕಾದ ಸಂದರ್ಭಗಳನ್ನು ಹೊರತುಪಡಿಸಿ ಪ್ರಕರಣಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಲು ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.<br><br>ಕಂದಾಯ ಇಲಾಖೆಯ ಅರೆ ನ್ಯಾಯಿಕ ಪ್ರಾಧಿಕಾರಗಳಾದ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ರವರ ನ್ಯಾಯಾಲಯಗಳಲ್ಲಿ ಕಳೆದ 6 ತಿಂಗಳ ಅವಧಿಯಲ್ಲಿ ನಿಯಮಾನುಸಾರ 61294 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆನ್‌ಲೈನ್ ಮೂಲಕ ನೀಡಲಾಗುತ್ತಿರುವ ಸೇವೆಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಪ್ರಮಾಣ ಪತ್ರ, ಭೂಮಂಜೂರಾತಿ (ಬಗರ್ ಹುಕುಂ, 94ಸಿ, 94ಸಿಸಿ), ಭೂಪರಿವರ್ತನೆ ಹಾಗೂ ಇತರ ಅರ್ಜಿಗಳಲ್ಲಿ ಎಷ್ಟು ವಿಲೇವಾರಿಗೆ ಬಾಕಿ ಇವೆ? ಉಭಯ ಜಿಲ್ಲೆಗಳಲ್ಲಿ 2023-24ರಲ್ಲಿ ಒಟ್ಟು ಎಷ್ಟು ಸೇವಾ ಸಂಬಂಧಿತ ಅರ್ಜಿಗಳನ್ನು ಪುರಸ್ಕರಿಸಲಾಗಿದೆ ಮತ್ತು ಯಾವ ಕಾರಣಕ್ಕಾಗಿ ಎಷ್ಟು ಅರ್ಜಿಗಳನ್ನು ತಿರಸ್ಕರಿಸಿದೆ; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆನ್‌ಲೈನ್ ಮೂಲಕ ನೀಡಲಾಗುತ್ತಿರುವ ಕಂದಾಯ ಇಲಾಖೆಗೆ ಸಂಬಂಧಿಸಿದ ಸೇವಾ ವಿಷಯದ ಅರ್ಜಿಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| (ಇ) | ಕರಾವಳಿ ಜಿಲ್ಲೆಗಳಲ್ಲಿ ಆನ್‌ಲೈನ್ ಮೂಲಕ ಭೂ ಪರಿವರ್ತನೆಗಾಗಿ ಮತ್ತು ಪ್ರಮಾಣ ಪತ್ರಗಳಿಗಾಗಿ ಸರ್ಕಾರ ನಿಗದಿಪಡಿಸಿದ ನಿಗದಿತ ದಾಖಲಾತಿಗಳನ್ನು ಅಪ್ಲೋಡ್ ಮಾಡಿ ಅರ್ಜಿ ಸಲ್ಲಿಸಿದ್ದರೂ ಸಹ ಕಂದಾಯ ಇಲಾಖೆ ವಿವಿಧ ಕಾರಣಗಳನ್ನು ನೀಡಿ ಸದರಿ ಅರ್ಜಿಗಳನ್ನು ತಿರಸ್ಕರಿಸುತ್ತಿರುವುದನ್ನು ತಡೆಗಟ್ಟಲು ಇಲಾಖೆ ಕೈಗೊಂಡ ಕ್ರಮಗಳೇನು; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆನ್‌ಲೈನ್ ಮೂಲಕ ಭೂ ಪರಿವರ್ತನೆಗಾಗಿ ಮತ್ತು ಪ್ರಮಾಣ ಪತ್ರಗಳಿಗಾಗಿ ಸರ್ಕಾರ ನಿಗದಿಪಡಿಸಿದ ನಿಗದಿತ ದಾಖಲಾತಿಗಳನ್ನು ಅಪ್ಲೋಡ್ ಮಾಡಿ ಅರ್ಜಿ ಸಲ್ಲಿಸಿರುವ ಪ್ರಕರಣಗಳನ್ನು ನಿಯಮಾನುಸಾರ ಅಂಗೀಕರಿಸಲಾಗಿರುತ್ತದೆ.<br><br>ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |

| | | |
|---|---|---|
| (ಈ) | ಈ ಸೇವೆಗಳಿಗಾಗಿ ಅರ್ಜಿಗಳ ಸ್ವೀಕಾರ ಹಾಗೂ ವಿಲೇವಾರಿ ಪ್ರಕ್ರಿಯೆಗೆ ಸರಿಯಾದ ಮಾನದಂಡಗಳನ್ನು ರೂಪಿಸದೆ ಇರುವ ಕಾರಣ ಅನಗತ್ಯ ಹಾಗೂ ಗಂಭೀರತೆಯಿಲ್ಲದ (ನಾನ್ ಸೀರಿಯಸ್) ಅರ್ಜಿಗಳ ಸಂಖ್ಯೆ ಹೆಚ್ಚಾಗಿ ಒಟ್ಟು ಅರ್ಜಿ ವಿಲೇವಾರಿ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಇಲಾಖೆಯು ಕೈಗೊಂಡಿರುವ ಕ್ರಮಗಳೇನು? | ಈ ಸೇವೆಗಳಿಗಾಗಿ ಅರ್ಜಿಗಳ ಸ್ವೀಕಾರ ಹಾಗೂ ವಿಲೇವಾರಿ ಪ್ರಕ್ರಿಯೆಗೆ ಮಾನದಂಡಗಳನ್ನು ಹಾಗೂ ಕಾಲಮಿತಿಯನ್ನು ನಿಗದಿಪಡಿಸಿದ್ದು, ಆನ್‌ಲೈನ್ ಮೂಲಕ ಸಾರ್ವಜನಿಕರು ಕಂದಾಯ ಸೇವೆಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಲಾಗುತ್ತದೆ. |

**ಸಂ: ಕಂಇ 258 ಟಿಆರ್‌ಎಂ 2024 (1609941)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

## ಶ್ರೀ ಮಂಜುನಾಥ ಭಂಡಾರಿ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 273 (379 )ರ ಉಪ ಪ್ರಶ್ನೆ (ಆ) ಉತ್ತರ

| ಕ್ರ.ಸಂಖ್ಯೆ | ಸೇವೆ ವಿವರ | ವಿಲೇವಾರಿಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ | 2023-24 ನೇ ಸಾಲಿನಲ್ಲಿ | | ತಿರಸ್ಕರಿಸಿದ ಅರ್ಜಿಗಳಲ್ಲಿ ಕಾರಣವಾರು ಪ್ರಕರಣಗಳ ವಿವರ |
|---|---|---|---|---|---|
| | | | ಅಂಗೀಕರಿಸಿದ ಅರ್ಜಿಗಳು | ತಿರಸ್ಕರಿಸಿದ ಅರ್ಜಿಗಳು | |
| **ದಕ್ಷಿಣ ಕನ್ನಡ ಜಿಲ್ಲೆ** | | | | | |
| 1 | ಭೂ ಪರಿವರ್ತನೆ | 116 | 3918 | 793 | ತಿರಸ್ಕರಿಸಿದ ಅರ್ಜಿಗಳ ಪೈಕಿ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಸಿ.ಆರ್.ಜೆಡ್. ನಿರಾಪೇಕ್ಷಣಾ ಪತ್ರ ಇಲ್ಲದಿರುವುದು, ಇಲಾಖಾ ಆಕ್ಷೇಪಣೆಗಳು, ರಸ್ತೆ ತಕರಾರು, ದ್ವಿ ಪ್ರತಿಯಲ್ಲಿ ಅರ್ಜಿ ಸಲ್ಲಿಸಿದ ಪ್ರಕರಣಗಳು ಇತ್ಯಾದಿ ಕಾರಣಗಳಿಂದ ಅರ್ಜ ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |
| 2 | ಅಟಲ್ ಜಿ ಪ್ರಮಾಣ ಪತ್ರ (ಜಾತಿ ಮತ್ತು ಆದಾಯ, ವಾಸ್ತವ್ಯ ದೃಢಪತ್ರ, ವಂಶವೃಕ್ಷ, ಪಿಂಚಣಿ ಇತ್ಯಾದಿ ಒಟ್ಟು 43 ಸೇವೆಗಳು) | 1074 | 264016 | 8469 | ತಿರಸ್ಕರಿಸಿದ ಅರ್ಜಿಗಳ ಪೈಕಿ ಅರ್ಜಿದಾರರು ಜಾತಿ, ಆದಾಯ ಮತ್ತು ವಯಸ್ಸಿನ ಮಾಹಿತಿ ಹಾಗೂ ಇನ್ನಿತರ ಪೂರಕ ದಾಖಲೆಗಳನ್ನು ಸಲ್ಲಿಸದೇ ಇರುವ ಪ್ರಕರಣಗಳನ್ನು, ದ್ವಿಪ್ರತಿ ಅರ್ಜಿಗಳು ಇತ್ಯಾದಿ ಕಾರಣಗಳಿಂದ ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |
| 3 | 94ಸಿ | 4609 | 1447 | 1186 | ತಿರಸ್ಕರಿಸಿದ ಅರ್ಜಿಗಳ ಪೈಕಿ, ಮನೆ ಇಲ್ಲದ ಪ್ರಕರಣಗಳು, ದಿನಾಂಕ 01/01/2015 ರ ನಂತರ ಆಕ್ರಮಣ, ರಸ್ತೆ ಮಾರ್ಜಿನ್, ವಾಸ್ತವ್ಯವಿರುವುದಿಲ್ಲ, ಅರಣ್ಯ ಇತ್ಯಾದಿ ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |
| 4 | 94ಸಿಸಿ | 721 | 1113 | 1142 | |
| 5 | ನಮೂನೆ 50 | 6 | 0 | 0 | ತಿರಸ್ಕರಿಸಿ ಅರ್ಜಿಗಳ ಪೈಕಿ ನಮೂನೆ 50,53 ಅರ್ಜಿ ಸಲ್ಲಿಸಿ ಜಮೀನು ಸ್ವಾದೀನ ಇಲ್ಲ, ಮಿತಿಗಿಂತ ಜಾಸ್ತಿ, ಅರಣ್ಯ, ಕಾನ,ಬಾಣೆ,ಕುಮ್ಕಿ, ಗೋಮಾಳ, ಹೊಸ ಆಕ್ರಮಣ,18 ವರ್ಷ ಪ್ರಾಯವಾಗದ,ನಗರ ವ್ಯಾಪ್ತಿ, ಕೃತಾವಳಿ ಇಲ್ಲ, ಪಟ್ಟಾ ಜಮೀನು, ದ್ವಿಪ್ರತಿ, ಹೊಳೆ ಇತ್ಯಾದಿ ಕಾರಣಗಳಿಂದ ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |
| 6 | ನಮೂನೆ 53 | 3554 | 0 | 0 | |
| 7 | ನಮೂನೆ 57 | 110857 | 84 | 10230 | |

# ಅನುಬಂಧ

## ಶ್ರೀ ಮಂಜುನಾಥ ಭಂಡಾರಿ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 273 (379 )ರ ಉಪ ಪ್ರಶ್ನೆ (ಆ) ಉತ್ತರ

| ಕ್ರ.ಸಂಖ್ಯೆ | ಸೇವೆ ವಿವರ | ವಿಲೇವಾರಿಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ | 2023-24 ನೇ ಸಾಲಿನಲ್ಲಿ | | ತಿರಸ್ಕರಿಸಿದ ಅರ್ಜಿಗಳಲ್ಲಿ ಕಾರಣವಾರು ಪ್ರಕರಣಗಳ ವಿವರ |
|---|---|---|---|---|---|
| | | | ಅಂಗೀಕರಿಸಿದ ಅರ್ಜಿಗಳು | ತಿರಸ್ಕರಿಸಿದ ಅರ್ಜಿಗಳು | |
| **ಉಡುಪಿ ಜಿಲ್ಲೆ** | | | | | |
| 1 | ಭೂ ಪರಿವರ್ತನೆ | 138 | 4520 | 559 | ತಿರಸ್ಕರಿಸಿದ ಅರ್ಜಿಗಳ ಪೈಕಿ ಸಿಆರ್‌ಝುಡ್ , ರಸ್ತೆ ತಕರಾರು , ದ್ವಿಪ್ರತಿ ಅರ್ಜಿ, ಪರಿಸರ ಸೂಕ್ಷ್ಮ ವಲಯ ಇತ್ಯಾದಿ ಕಾರಣಗಳಿಂದ ಅರ್ಜಿ ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |
| 2 | ಅಟಲ್ ಜಿ ಪ್ರಮಾಣ ಪತ್ರ ( ಜಾತಿ ಮತ್ತು ಆದಾಯ , ವಾಸ್ತವ್ಯ ದೃಢಪತ್ರ ,ವಂಶವೃಕ್ಷ , ಪಿಂಚಣಿ ಇತ್ಯಾದಿ ಒಟ್ಟು 43 ಸೇವೆಗಳು ) | 2880 | 109181 | 6570 | ತಿರಸ್ಕರಿಸಿದ ಅರ್ಜಿಗಳ ಪೈಕಿ ಅರ್ಜಿದಾರರು ಜಾತಿ ,ಆದಾಯ ಮತ್ತು ವಯಸ್ಸಿನ ಮಾಹಿತಿ ಹಾಗೂ ಇನ್ನಿತರ ಪೂರಕ ದಾಖಲೆಗಳನ್ನು ಸಲ್ಲಿಸದೇ ಇರುವ ಪ್ರಕರಣಗಳನ್ನು , ದ್ವಿಪ್ರತಿ ಅರ್ಜಿಗಳು ಇತ್ಯಾದಿ ಕಾರಣಗಳಿಂದ ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |
| 3 | 94 ಸಿ | 3376 | 309 | 270 | ತಿರಸ್ಕರಿಸಿದ ಅರ್ಜಿಗಳ ಪೈಕಿ ದಿನಾಂಕ:01/01/2015 ರ ನಂತರ ಆಕ್ರಮಣ, ರಸ್ತೆ ಮಾರ್ಜಿನ್, ವಾಸ್ತವ್ಯವಿರುವುದಿಲ್ಲ. ಸಂಪೂರ್ಣ ಅರಣ್ಯ ಪ್ರದೇಶವಿರುವ ಇತ್ಯಾದಿ ಪ್ರಕರಣಗಳನ್ನು ತಿರಸ್ಕರಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ. |
| | 94 ಸಿಸಿ | 1049 | 94 | 10 | |
| 4 | ಬಗರ್ ಹುಕುಂ ( 50 , 53, 57) | 66610 | 0 | 10033 | ತಿರಸ್ಕರಿಸಿದ ಅರ್ಜಿಗಳಲ್ಲಿ ಕೃತಾವಳಿ ಇರುವುದಿಲ್ಲ , ಇತ್ತೀಚಿನ ಅತಿಕ್ರಮಣ , ನಗರ, ಪುರಸಭಾ ಮತ್ತು ಪಟ್ಟಣ ಪಂಚಾಯತ್ ವ್ಯಾಪ್ತಿ ಹಾಗೂ ಅದರ ಪರಿಮಿತಿಯಿಂದ 5 ಕಿ.ಮೀ ವ್ಯಾಪ್ತಿ , ಅನಧಿಕೃತವಾಗಿ ಸಾಗುವಳಿ ಮಾಡುವ ಅವಧಿಗೆ ಅರ್ಜಿದಾರನಿಗೆ ಹದಿನೆಂಟು ವರ್ಷವಾಗದೇ ಇರುವ ಪ್ರಕರಣಗಳು (Applicant Age below 18 as on Eligibility date) ಮತ್ತು ಅರಣ್ಯ ಪೊರಂಬೋಕು, ರಸ್ತೆ, ಮಾರ್ಜಿನ್ ಹೊಳೆ, ಇತ್ಯಾದಿ ಜಮೀನು ಎಂಬ ಕಾರಣಕ್ಕಾಗಿ ತಿರಸ್ಕರಿಸಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ. |

ಪ್ರಾದೇಶಿಕ ಆಯುಕ್ತರ ಪರವಾಗಿ,
ಮೈಸೂರು ವಿಭಾಗ, ಮೈಸೂರು